# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 111 (149) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಟಿ.ಎ. ಶರವಣ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 05.12.2023 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳಿಗೆ ಬಂಡವಾಳ ಸೆಳೆಯುವ ನಿಟ್ಟಿನಲ್ಲಿ ಸರ್ಕಾರದ ಅಧಿಕಾರಿಗಳ ನಿಯೋಗದ ಜೊತೆ ಕೈಗೊಂಡ ಪ್ರವಾಸದ ಸಂಪೂರ್ಣ ವಿವರ ನೀಡುವುದು; | ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳಿಗೆ ಬಂಡವಾಳ ಸೆಳೆಯುವ ನಿಟ್ಟಿನಲ್ಲಿ ದಿನಾಂಕ 25ನೇ ಸೆಪ್ಟಂಬರ್ 2023 ರಿಂದ 6ನೇ ಅಕ್ಟೋಬರ್ 2023ರವರೆಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ನಿಯೋಗವು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ (ಯು.ಎಸ್.ಎ) ಪ್ರವಾಸ ಕೈಗೊಳ್ಳಲಾಗಿದೆ. |
| ಆ | ಈ ಪ್ರವಾಸಕ್ಕೆ ಸರ್ಕಾರ ಖರ್ಚು ಮಾಡಿದ ಹಣದ ಸಂಪೂರ್ಣ ಮಾಹಿತಿ ಒದಗಿಸುವುದು; | ಈ ಪ್ರವಾಸಕ್ಕೆ ಒಟ್ಟು ರೂ.2,15,81,103/-ಗಳ ವೆಚ್ಚ ಆಗಿರುತ್ತದೆ.<br>ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಇ | ಈ ಪ್ರವಾಸದ ವೇಳೆ ಯಾವ ಕಂಪನಿಗಳಿಂದ ಎಷ್ಟು ಬಂಡವಾಳ ಹೂಡಿಕೆಯ ಭರವಸೆ ಬಂದಿದೆ;<br>(ವಿವರ ನೀಡುವುದು) | ಈ ಪ್ರವಾಸದ ವೇಳೆ ಒಟ್ಟು 36 ಕಂಪನಿಗಳೊಂದಿಗೆ ಸಭೆ, 27 ಕಂಪನಿ ಮುಖ್ಯಸ್ಥರೊಂದಿಗೆ ಪ್ರತ್ಯೇಕ ಸಭೆಗಳು ಹಾಗೂ 9 ಸಂವಾದ ಸಭೆಗಳನ್ನು ಮಾಡಲಾಗಿದೆ.<br>ಈಗಾಗಲೇ ರಾಜ್ಯದಲ್ಲಿ ಬಂಡವಾಳ ಹೂಡಿರುವ ಸಂಸ್ಥೆಗಳನ್ನು ಇನ್ನು ಹೆಚ್ಚಿನ ಬಂಡವಾಳವನ್ನು ರಾಜ್ಯದಲ್ಲಿ ಹೂಡಲು ಕೋರಲಾಗಿದೆ ಹಾಗೂ ಹೊಸ ಕಂಪನಿಗಳ ಮುಖ್ಯಸ್ಥರೊಂದಿಗೆ ಸಭೆಗಳನ್ನು ನಡೆಸಿ ಸದರಿಯವರನ್ನು ರಾಜ್ಯದಲ್ಲಿ ಬಂಡವಾಳ ಹೂಡಲು ಆಹ್ವಾನಿಸಲಾಗಿದೆ.<br>ಇದರಿಂದ ಅಂದಾಜು ರೂ.25,000 **ಕೋಟಿ** ಬಂಡವಾಳ ಹೂಡಿಕೆ ಪ್ರಸ್ತಾವನೆಗಳ ನಿರೀಕ್ಷಣೆ ಹೊಂದಿದೆ. |
| ಈ | ಈ ಪ್ರವಾಸದ ನಂತರ ಇಲ್ಲಿಯವರೆಗೆ ಎಷ್ಟು ಕಂಪನಿಗಳು ಬಂಡವಾಳ ಹೂಡಿಕೆಗೆ ಒಡಂಬಡಿಕೆ ಮಾಡಿಕೊಂಡ ಕಂಪನಿಗಳ ವಿವರ ನೀಡುವುದು ಮತ್ತು ಈ ಕಂಪನಿಗಳನ್ನು ಎಲ್ಲಿ ಪ್ರಾರಂಭಿಸಲಾಗುವುದು? | ಈ ಪ್ರವಾಸದ ನಂತರ ಇಲ್ಲಿಯವರೆಗೆ ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಯಾವುದೇ ಒಡಂಬಡಿಕೆ ಮಾಡಿಕೊಂಡಿರುವುದಿಲ್ಲ. |

ಸಿಐ 309 ಎಸ್‌ಪಿಐ 2023

(**ಎಂ.ಬಿ. ಪಾಟೀಲ**)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 111 (149) ಕ್ಕೆ ಅನುಬಂಧ

ಯುನೈಟೆಡ್ ಸ್ಟೇಟ್ಸ್ ಆಫ್ ಆಮೆರಿಕಾ (ಯು.ಎಸ್.ಎ)

| ಕ್ರಮ ಸಂಖ್ಯೆ | ವಿವರ | ಖರ್ಚು (ರೂ.ಗಳಲ್ಲಿ) |
|---|---|---|
| 1 | ವಿಮಾನ ದರಗಳು, ವೀಸಾ ಮತ್ತು ಸಾಗರೋತ್ತರ ವಿಮಾ ಶುಲ್ಕಗಳು | 89,50,614 |
| 2 | ವಾಸ್ತವ್ಯ ಮತ್ತು ಅಧಿಕೃತ ಸಭೆಯ ವೆಚ್ಚಗಳು | 59,09,973 |
| 3 | ಸ್ಥಳೀಯ ಸಾರಿಗೆ ವ್ಯವಸ್ಥೆ (ಯು.ಎಸ್.ಎ) | 54,86,435 |
| 4 | ಕೊರಿಯರ್, ಸ್ಮರಣಿಕೆಗಳು, ಮುದ್ರಣ ಮತ್ತು ಲೇಖನ ಸಾಮಾಗ್ರಿ | 5,28,581 |
| 5 | ತುಟ್ಟಿ ಭತ್ಯೆ | 7,05,500 |
| | ಒಟ್ಟು | **2,15,81,103** |